ಬಿ) ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

1976 (2477) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನಬಾಗೇವಾಡಿ ಕೇಂದ್ರ ಬಸ್ ನಿಲ್ದಾಣವನ್ನು ಯಾವಾಗ ನಿರ್ಮಿಸಲಾಗಿದೆ;

ಆ) ಅದು ಈಗ ಯಾವ ಸ್ಥಿತಿಯಲ್ಲಿದೆ;

ಇ) ಇದರ ಅಭಿವೃದ್ಧಿಗೆ ಅಥವಾ ನವೀಕರಣಕ್ಕೆ ಸರ್ಕಾರ ಕೈಗೊಂಡ ಕ್ರಮವೇನು;

ಈ) ಅದರ ಅಭಿವೃದ್ಧಿಗೆ ಅಥವಾ ನವೀಕರಣಕ್ಕೆ ತಗಲಬಹುದಾದ ವೆಚ್ಚ ಎಷ್ಟು;

ಉ) ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಬಸ್ ನಿಲ್ದಾಣವನ್ನು ಅಭಿವೃದ್ಧಿ ಅಥವಾ ನವೀಕರಣಗೊಳಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) 1972 ನೇ ಇಸವಿಯಲ್ಲಿ ನಿರ್ಮಿಸಲಾಗಿದೆ.

ಆ) ಸುಸ್ಥಿತಿಯಲ್ಲಿರುತ್ತದೆ.

ಇ) ನಿರ್ಮಲ್ ಮಾದರಿಯ ಶೌಚಾಲಯ ನಿರ್ಮಾಣ ಮಾಡುವ ಸಂಬಂಧ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು. ಅವಶ್ಯಕ ದುರಸ್ತಿ ಕಾಮಗಾರಿಗಳನ್ನು ಈಗಾಗಲೇ ನಿರ್ವಹಿಸಲಾಗಿದೆ.

ಈ) ಅಭಿವೃದ್ಧಿ ಹಾಗೂ ನವೀಕರಣಕ್ಕೆ ರೂ. 31.00 ಲಕ್ಷಗಳ ಅಂದಾಜು ವೆಚ್ಚವನ್ನು ಆಯವ್ಯಯದಲ್ಲಿ ಅಳವಡಿಸಲಾಗಿದೆ.

ಉ) ನಿರ್ಮಲ್ ಮಾದರಿಯ ಶೌಚಾಲಯವನ್ನು ನಿರ್ಮಿಸಲು ಟೆಂಡರ್ ಕರೆಯಲಾಗಿದೆ. ಇದನ್ನು ತುರ್ತಾಗಿ ಪೂರ್ಣಗೊಳಿಸಲಾಗುವುದು.

1979 (2480) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಸುಮಾರು 14 ಸಾವಿರ ಜನ ದಳಪತಿಗಳು ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೇ;

2) ಈ ದಳಪತಿಗಳಿಗೆ ಗೌರವಧನ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

3) ರಿಟ್ ಪ್ರಿಟಿಷನ್ ನಂ. 17527/2006 ಉಚ್ಚ ನ್ಯಾಯಾಲಯದ ಆದೇಶವನ್ನು ಸರ್ಕಾರ ಪಾಲಿಸುತ್ತಿದೆಯೇ;

4) ಹಾಗಿದ್ದಲ್ಲಿ ದಳಪತಿಗಳ ಗೌರವಧನ ಹಾಗೂ ಬಾಕಿ ಇರುವ ಗೌರವಧನ ಬಿಡುಗಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

5) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜನ ದಳಪತಿಗಳು ಕೆಲಸನಿರ್ವಹಿಸುತ್ತಿದ್ದಾರೆ (ತಾಲ್ಲೂಕಾವಾರು ಮಾಹಿತಿ ನೀಡುವುದು)

6) ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಜನ ದಳಪತಿಗಳು ಉಚ್ಚನ್ಯಾಯಾಲಯದ ಮೊರೆ ಹೋಗಿದ್ದಾರೆ?

ಶ್ರೀ ಎಂ. ಪಿ. ಪ್ರಕಾಶ್ (ಗೃಹ ಮಂತ್ರಿಗಳು)

1) ಪೊಲೀಸ್ ಇಲಾಖೆಯಲ್ಲಿ ದಳಪತಿಗಳ ನೇಮಕವನ್ನು ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964 ರ ಪ್ರಕರಣ ಕ್ರಮವಾಗಿ 8 ಮತ್ತು 9 ರಡಿಯಲ್ಲಿ 7232 ದಳಪತಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು. ಕರ್ನಾಟಕ ಅಧಿನಿಯಮ 1964 ರ 34 ರಮೇರೆಗೆ ದಳಪತಿಗಳನ್ನು ಗೌರವಾನ್ವಿತ ಹುದ್ದೆಗಾಗಿ ಸಂಭಾವನೆಯಿಲ್ಲದ ಹುದ್ದೆ ಎಂದು ನೇಮಕ ಮಡಿಕೊಳ್ಳಲಾಗುತ್ತಿತ್ತು. ಆದರೆ, ನೇಮಕಮಾಡಿಕೊಳ್ಳಲಾದ ದಳಪತಿಗಳ ಅಧಿಕಾರಾವಧಿ 5 ವರ್ಷಗಳಾಗಿದ್ದು, ದಳಪತಿಗಳು ನವೀಕರಣಗೊಳಿಸದೇ ಇದ್ದುದರಿಂದ ದಳಪತಿ ಹುದ್ದೆ ರದ್ದಾಗಿರುತ್ತದೆ. ಹಾಗೂ ತದನಂತರ ಯಾವುದೇ ನೇಮಕಾತಿ ಮಾಡಿಕೊಂಡಿರುವುದಿಲ್ಲ.

2), 3) ಮತ್ತು 4)

ಗ್ರಾಮ ರಕ್ಷಣಾ ದಳಗಳ ನಿಯಮ 1965 ರ ನಿಯಮ 16(ಐ) ಪ್ರಕಾರ ದಳಪತಿಗಳು ಕೆಲಸ ನಿರ್ವಹಿಸಿದ ಬಗ್ಗೆ ಕಾಲಕಾಲಕ್ಕೆ ವರದಿಗಳ ರಿಜಿಸ್ಟರ್ ಇತ್ಯಾದಿಗಳನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ ಹಾಗೂ ಈ ದಾಖಲಾತಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ಪ್ರಮಾಣೀಕರಿಸಬೇಕಾಗಿರುತ್ತದೆ. ಆದರೆ, ಈ ರೀತಿಯಾಗಿ ಯಾವುದೇ ದಳಪತಿಗಳು ಮೇಲಿನ ನಿಯಮದನ್ವಯ ಕೆಲಸ ನಿರ್ವಹಿಸಲ್ಲವಾದ್ದರಿಂದ ಅವರು ಗೌರವಧನ ಪಡೆಯಲು ಅರ್ಹರಿರುವುದಿಲ್ಲ.

ಅಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಾಶಾಇ/38/ಶಾಸನ/2003, ಬೆಂಗಳೂರು ದಿನಾಂಕ 08–03–04 ರಂದು ಕರ್ನಾಟಕ ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964 ನ್ನು ಹಿಂತೆಗೆದುಕೊಂಡಿರುತ್ತದೆ.

5) ಬಿಜಾಪುರ ಜಿಲ್ಲೆಯಲ್ಲಿ ಸದ್ಯಕ್ಕೆ ಯಾರು ದಳಪತಿಗಳೆಂದು ಕೆಲಸ ನಿರ್ವಹಿಸುತ್ತಿರುವುದಿಲ್ಲ. ಈ ಹಿಂದೆ 567 ಜನ ದಳಪತಿಗಳೆಂದು ಕೆಲಸ ನಿರ್ವಹಿಸುತ್ತಿದ್ದರು, ತಾಲ್ಲೂಕಾವಾರು ವಿವರಗಳು ಈ ಕೆಳಗಿನಂತಿದೆ.

ತಾಲ್ಲೂಕಗಳು	ದಳಪತಿಗಳ ಸಂಖ್ಯೆ
1) ಬಿಜಾಪುರ ತಾಲ್ಲೂಕು	99
2) ಇಂಡಿ ತಾಲ್ಲೂಕು	109
3) ಸಿಂದಗಿ ತಾಲ್ಲೂಕು	125
4) ಬಸವನ ಬಾಗೇವಾಡಿ ತಾಲ್ಲೂಕು	103
5) ಮುದ್ದೇಬಿಹಾಳ ತಾಲ್ಲೂಕು	131

6) 129

1980 (2481) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಕೆ.ಪಿ.ಟಿ.ಸಿ.ಎಲ್.ಗಳಲ್ಲಿ ಲೈನ್‌ಮನ್ ಹುದ್ದೆಗಳಿಗೆ ನೇಮಕಗೊಳ್ಳಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳೇನು;

ಆ) ಯಾವ ನೇಮಕಾತಿ ಮಾನದಂಡಗಳನ್ನು ಆಧಾರವಾಗಿಟ್ಟುಕೊಂಡು ಪುರಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಲೈನ್‌ಮನ್ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ;

ಇ) ರಾಜ್ಯದಲ್ಲಿ ಮಹಿಳೆಯರನ್ನು ಲೈನ್‌ಮನ್ ಹುದ್ದೆಗಳಿಗೆ ಯಾವ ವರ್ಷದಿಂದ ನೇಮಕ ಮಾಡಿಕೊಳ್ಳಲು ಆರಂಭಿಸಲಾಯಿತು;

ಈ) ಈವರೆಗೆ ಎಷ್ಟು ಜನ ಮಹಿಳೆಯರನ್ನು ನೇಮಕ ಮಾಡಿಕೊಳ್ಳಲಾಗಿದೆ;

ಉ) ಮಹಿಳಾ ಲೈನ್‌ಮನ್‌ಗಳು ಹಳ್ಳಿಗಳಿಗೆ ಹೋಗಿ ಕೆಲಸ ನಿರ್ವಹಿಸಲು ಸಮರ್ಥರಿದ್ದಾರೆಯೇ;

ಊ) ಅವರ ಸೇವೆ ತೃಪ್ತಿಕರವೆಂದು ಸರ್ಕಾರಕ್ಕೆ ಅಥವಾ ಇಲಾಖೆಗೆ ಕಂಡು ಬಂದಿದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):–

ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಹಾಯಕ ಮಾರ್ಗದಾಳು ಹುದ್ದೆಗಳನ್ನು ನೇರ ನೇಮಕಾತಿಯಲ್ಲಿ ಭರ್ತಿ